ಸ್ವಚ್ಛಂದವಾಗಿ ಓಡಾಡಿಕೊಂಡಿರುವುದು ಅವಳಿಗೆ ಹಿತ. ಅನಿವಾರ್ಯವಾಗಿ ಅವಳ ಇಷ್ಟಕ್ಕೆ ತಲೆಬಾಗಿ, ಮಗಳು ಕಾಲೇಜಿನಿಂದ ಬರುವುದು ಚೂರು ತಡವಾದರೂ ಜನಾರ್ದನ ಬಸ್ಸು ನಿಲ್ಲುವ ಜಾಗಕ್ಕೆ ಹೋಗಿ ಕಾದು ನಿಂತಿರುತ್ತಿದ್ದ ತನ್ನ ಕಾರಿನ ಸಮೇತ. 'ನಿನ್ನ ಬಾಡಿಗಾರ್ಡ್ ಬಂದ್ಬಿಟ್ಟಿದಾರಲ್ಲೇ...' ಹಾಸ್ಯ ಮಾಡುತ್ತಿದ್ದರು ಗೆಳತಿಯರು. ಜನಾರ್ದನನಿಗೊಂದು ಪೂಜೆ ಆಗುತ್ತಿತ್ತು.

"ನಂಗೋಸ್ಕರ ಕಾಯ್ಬೇಡ ಅಂತ ಹೇಳಿಲ್ವಾ ನಾನು? ಕನ್ನಡ ಅರ್ಥ ಆಗಲ್ವಾ ನಿಂಗೆ?"

ಮಗಳು ಸ್ನೇಹಿತೆಯರ ಎದುರೆದುರೇ ದಬಾವಣೆಯ ಮಾತಾಡಿದರೆ ಜನಾರ್ದನನಿಗೆ ಅದೂ ಒಂದು ಚಂದ. ಖುಷಿ. ಈಗ ಯೋಚಿಸಿದರೆ ಸ್ಪಷ್ಟವಾಗುತ್ತದೆ ಜನಾರ್ದನನಿಗೆ, ನೇತ್ರಾ ಅಪ್ಪ, ಅಮ್ಮನನ್ನು ತನ್ನಿಷ್ಟಕ್ಕೆ ಮಣಿಸಿ ಕುಣಿಸಿದವಳೇ ವಿನಾ ಅವರು ಹೇಳಿದ್ದನ್ನು ಯಾವತ್ತೂ ಕಿವಿಗೆ ಹಾಕಿಕೊಂಡವಳಲ್ಲ. ಅವರ ಜಗತ್ತಿನ ಕೇಂದ್ರಬಿಂದು ತಾನು ಎನ್ನುವ ಅರಿವು ಎಂತಾ ಸಂದರ್ಭದಲ್ಲೂ ಅವಳಲ್ಲಿ ಜಾಗೃತವಾಗಿರುತ್ತಿತ್ತು. ಅವಳ ಇಷ್ಟಕ್ಕೆ ಸಣ್ಣದೊಂದು ನಕಾರಾತ್ಮಕ ಪ್ರತಿಕ್ರಿಯೆ ದೊರಕಿದರೂ ಅಸಹನೆ ಮಾತಾಗಿ ಸಿಡಿಯುತ್ತಿತ್ತು. 'ಮಾರಾಯ್ತೀ, ನೀನು ಸಿಟ್ಟು ಮಾಡ್ಕಂಬೇಡ ಕಣೇ. ಈಗೇನು, ನೀನು ಹೇಳಿದ ಹಾಗೆ ನಡೀಬೇಕು ತಾನೇ?' ಹೀಗೆ ಬಗ್ಗಿದ್ದಕ್ಕೆ ಲೆಕ್ಕವಿದೆಯಾ? ಇಲ್ಲ... ಇಲ್ಲ...

★★★

'ತಮ್ಮ ನಿರೀಕ್ಷೆಗೆ ತಕ್ಕಂತಾ ಸರಿಯಾದ ಹುಡುಗ ಸಿಗಬೇಕಾದರೆ ಒಂದೆರಡು ವರ್ಷ ಹುಡುಕಬೇಕಾದೀತು' ಎನ್ನುವ ವಾಸ್ತವಪ್ರಜ್ಞೆಯಿಂದ ಆರಂಭವಾಗಿತ್ತು ನೇತ್ರಳಿಗಾಗಿ ವರಾನ್ವೇಷಣೆ. ಇಪ್ಪತ್ತೆರಡು ತುಂಬಿತ್ತು ನೇತ್ರನಿಗೆ. ಅವಳದ್ದು ಮಾತ್ರಾ ಅಲ್ಲ, ಹೆತ್ತವರ ನಿರೀಕ್ಷೆಗಳೇನು ಕಮ್ಮಿ ಇದ್ದುವೇ? 'ಹಗಲು ಹುಟ್ಟಿರ್ಬಾರ್ದು, ರಾತ್ರಿ ಹುಟ್ಟಿರ್ಬಾರ್ದು. ಮನುಷ್ಯ ಆಗಿರ್ಬಾರ್ದು, ದೇವರಾಗಿರ್ಬಾರ್ದು. ಭೂಮಿ ಮೇಲೆ ಆಗ್ಬಾರ್ದು, ಅಂತರಿಕ್ಷದಲ್ಲಾಗ್ಬಾರ್ದು...' ಎಂದೆಲ್ಲಾ ದೇವರುಗಳನ್ನು ಒಲಿಸಿಕೊಂಡ ರಾಕ್ಷಸರು ತಮ್ಮ ಚಿರಂಜೀವತ್ವದ ಕುರಿತು ವರದ ರೂಪದಲ್ಲಿ ಕೇಳಿಕೊಳ್ಳುತ್ತಿದ್ದ ನಿಬಂಧನೆಗಳ ಕತೆಗಳಂತೆ ಮನೆಯಲ್ಲಿದ್ದವರ ಮನಸ್ಸಿನಲ್ಲಿ ಬೇರೆಬೇರೆ ಅಪೇಕ್ಷೆಗಳಿದ್ದುವು. ಇವರು ಕೇಳುವುದನ್ನೇ ಕಾದು ಕೂತಿದ್ದ ಅನ್ನುವಂತೆ 'ತಥಾಸ್ತು' ಎಂದು ವರದಹಸ್ತ ತೋರಿಸಿಬಿಟ್ಟ ಮೇಲಿದ್ದ ಪರಮಾತ್ಮ. ಎಲ್ಲಾ ಅವರವರ ಅದೃಷ್ಟಕ್ಕೆ ಬಿಟ್ಟ ಮಾತು. ಅದೃಷ್ಟ ಇದ್ದರೆ ಬೇಕಾಗಿದ್ದೆಲ್ಲಾ ಒದ್ದುಕೊಂಡು ಬರುತ್ತದೆ. ಎಂಜಿನಿಯರ್ ಅಳಿಯ ಸಿಕ್ಕಿದ ಖುಷಿಯಲ್ಲಿ 'ದುಡ್ಡಿನ ಹೊಳೆ ಹರಿಸಿ' ಅನ್ನುವಂತೆ ಮದುವೆ ಮಾಡಿಕೊಟ್ಟ ಜನಾರ್ದನ. ಮಗಳು ದೂರ ಹೋಗುತ್ತಾಳೆನ್ನುವ ಎದೆಗುದಿಯ ನಡುವೆಯೂ ಒಳ್ಳೆಯ ಮನೆ ಸೇರಿಕೊಂಡಳೆಂಬ ಸಮಾಧಾನ ದಂಪತಿಗೆ. ಅಳಿಯ ಗಿರೀಶ ಸರಳ, ಸಜ್ಜನಿಕೆಯ ಸುಸ್ವಭಾವಿ ಎಂಬುದನ್ನು ಅಲ್ಪಕಾಲದ ಒಡನಾಟದಿಂದಲೇ ಗಂಡಹೆಂಡತಿ ಕಂಡುಕೊಂಡಿದ್ದರು. ಅವನಿಗೆ ಹೋಲಿಸಿದರೆ ತಮ್ಮ ಮಗಳೇ... ಛೇಛೇ, ಅಪ್ಪಿತಪ್ಪಿ ಕೂಡಾ ದಂಪತಿ ಈ ವಿಚಾರ ಮಾತಾಡಿಕೊಳ್ಳುತ್ತಿರಲಿಲ್ಲ. ಮುದ್ದು ಮಾಡಿ ಬೆಳೆಸಿದ್ದಕ್ಕೆ ತಮ್ಮೊಡನೆ ಹಾಗಿರುತ್ತಾಳೆಯೇ ವಿನಾ ಎಲ್ಲರ ಜೊತೆ ಜೋರು ತೋರಿಸಲು ಹೋಗುವಷ್ಟು ಮಗಳು ಬುದ್ಧಿಗೇಡಿಯಲ್ಲ ಎಂದು ಅವರ ನಂಬಿಕೆ. ಅದು ಆಗಿದ್ದೂ ಹಾಗೇ...

★★★

ಮದುವೆಯಾಗಿ ವರ್ಷ ಕಳೆಯುದರಲ್ಲಿ ಮಗಳು ಗರ್ಭಿಣಿ. ಹುಟ್ಟಿದ ಮನೆ, ಹೊಕ್ಕ